ATTEGOLI ALP SCHOOL
KAYYAR. P.O. KAYYAR-671322
MANJESHWAR SUB-DIST.
Email: 11249attegoli@gmail.com

# ACADEMIC MASTER PLAN 2025-26

ಹಿರಿಮೆಗೊಂದು ಮೆಟ್ಟಿಲು.

# ಅನುಕ್ರಮಣಿಕೆ.


| ಕ್ರ.ಸಂ. | ವಿಷಯ | ಪುಟ ಸಂಖ್ಯೆ. |
|---|---|---|
| 1 | ಮುನ್ನುಡಿ | 1-3 |
| 2 | ವಿದ್ಯಾಲಯದ ಭೌತಿಕ ಸೌಕರ್ಯಗಳು | 4- |
| 3 | ಮಕ್ಕಳ ಸಂಖ್ಯೆ. | 5 |
| 4 | ಅಧ್ಯಾಪಕರು - ಪ್ರಸ್ತುತ ಸ್ಥಿತಿ | 6 |
| 5 | ದೃಷ್ಟಿಕೋನ | 7-8 |
| 6 | ಸಾಮಾನ್ಯ ಉದ್ದೇಶಗಳು | 9-10 |
| 7 | ಶೈಕ್ಷಣಿಕ ಚಟುವಟಿಕೆಗಳು | 11-19 |
| 8 | ತಕ್ಷಣ ಕೈಗೊಳ್ಳುವ ಚಟುವಟಿಕೆಗಳು | 20 |
| 9 | ಉಪಸಂಹಾರ. | 21 |

## ಮುನ್ನುಡಿ

ಅಟ್ಟೆಗೋಳಿ ಅನುದಾನಿತ ಕಿರಿಯ ಪ್ರಾಥಮಿಕ ಶಾಲೆ, ಕಂಬ್ಳೂರು 1954ನೇ ಇಸವಿಯಲ್ಲಿ ಆರಂಭವಾಯಿತು. ಇದು ಪೈವಳಿಕೆ ಪಂಚಾಯತಿನ 18ನೇ ಕಳಾಯಿ ವಾರ್ಡಿನಲ್ಲಿದೆ. ಮತ್ತು ಕಂಬ್ಳೂರು ಗ್ರಾಮದಲ್ಲಿದೆ. ಈ ಸಂಸ್ಥೆಯನ್ನು ದಿ.ಕಳಾಯಿ ಹಾಜಿ ಅಬ್ದುಲ್ಲ ಮಾಸ್ಟರ್‌ರವರು ಸ್ಥಾಪಿಸಿದರು. ಈಗ ಅಬ್ದುಲ್ಲ ಹಾಜಿ ಮಾಸ್ಟರ್ ಮೆಮೋರಿಯಲ್ ಎಜುಕೇಶನ್ ಟ್ರಸ್ಟ್‌ನಲ್ಲಿ ಸ್ಥಾಪಕ ಶ್ರೀ ಅಹಮ್ಮದ್ ಹುಸೇನ್ ಸರ್‌ರವರು ಮೇನೇಜರರಾಗಿರುವರು. ಇಲ್ಲಿ ಎಲ್.ಕೆ.ಜಿ.ಯಿಂದ ಐದನೇ ತರಗತಿಯವರೆಗೆ ಇದ್ದು ಇದು ಒಂದು ಅನುದಾನಿತ ಶಾಲೆಯಾಗಿದೆ.

ಪ್ರಸ್ತುತ ಈ ಶಾಲೆಯು ಸೃಜನಶೀಲ, ಉತ್ಸಾಹಿ ಅಧ್ಯಾಪಿಕೆ-ಅಧ್ಯಾಪಕರ ಅವಿರತ ಪ್ರಯತ್ನದೊಂದಿಗೆ ಸಾಮಾಜಿಕವಾಗಿಯೂ, ಆರ್ಥಿಕವಾಗಿಯೂ ಹಿಂದುಳಿದಿರುವ ಈ ಪ್ರದೇಶವು ಸಾಂಸ್ಕೃತಿಕವಾಗಿ, ನೈತಿಕವಾಗಿ, ಆರ್ಥಿಕವಾಗಿ ಅಭಿವೃದ್ಧಿಯ ಪಥದಲ್ಲಿ ಸಾಗಿಸಲು ಪಠ್ಯಾಧಾರಿತ ಶಿಕ್ಷಣದ ಮೂಲಕ ಶ್ರಮಿಸುತ್ತಿದೆ. ಈ ಶಾಲೆ ಹತ್ತಿರದ ಕಂಬ್ಳೂರು, ಚೋಡುಕಲ್ಲು, ನವೋದಯ ನಗರ, ಅಟ್ಟೆಗೋಳಿ, ಮೀಂಜ, ಬಾಯಿಕಟ್ಟೆ ಸುತ್ತಮುತ್ತಲಿನ ಪ್ರದೇಶದ ಮಕ್ಕಳಿಗೆ ವಿದ್ಯಾರ್ಜನೆ ಮಾಡಲು ಬಹಳ ಉಪಯುಕ್ತವಾದ ಸಂಸ್ಥೆಯಾಗಿದೆ. ಪ್ರಸ್ತುತ ಈ ಶಾಲೆಯಲ್ಲಿ ಮಕ್ಕಳು ಕಲಿಯು-ತ್ತಿದ್ದು 5 ಮಂದಿ ಖಾಯಂ ಅಧ್ಯಾಪಕರು ಮತ್ತು ಒಬ್ಬರು ದಿನವೇತನ ಅಧ್ಯಾಪಿಕೆ, ಒಬ್ಬರು ಮಲೆಯಾಳಂ ಭಾಷಾ ಅಧ್ಯಾಪಿಕೆ ಸೇವಾನಿರತರಾಗಿದ್ದಾರೆ.

ಶಾಲೆಯ ಅಭಿವೃದ್ಧಿಗೆ ಪೂರಕವಾಗಿ ನಮ್ಮ ಶಾಲೆಯಲ್ಲಿ ರಾಷ್ಟ್ರೀಯ ಹಬ್ಬಗಳು, ಜನಾಚರಣೆಗಳು, ಶಾಲಾ ವಾರ್ಷಿಕೋತ್ಸವ, ಶೈಕ್ಷಣಿಕ ಪ್ರವಾಸ ಇತ್ಯಾದಿ ಚಟುವಟಿಕೆಗಳನ್ನು ಎಸ್.ಡಿ.ಎಂ, ಎಂ.ಪಿ.ಟಿ.ಎ ಯ ಸೂಕ್ತವಾದ ಸಹಕಾರದೊಂದಿಗೆ ನಡೆಸಲಾಗುತ್ತಿದೆ. ಉಪಜಿಲ್ಲಾ ಮಟ್ಟದಲ್ಲಿ ನಡೆಯುವ ಕ್ರೀಡೋತ್ಸವ, ಬಾಲಕಲೋತ್ಸವ ವಿಜ್ಞಾನ ಮೇಳ ಇತ್ಯಾದಿಗಳಲ್ಲಿ ಮಕ್ಕಳು ಭಾಗವಹಿಸುತ್ತಾರೆ. ತರಗತಿ ಕೋಣೆಗಳನ್ನು ಆಕರ್ಷಕವಾಗಿಯೂ ಮಕ್ಕಳಿಗೆ ಬರೆಯಲು ನೆಲಮಟ್ಟದಲ್ಲಿ ಕರಿಹಲಗೆಯನ್ನು ಮಾಡಲಾಗಿದೆ.

ಪ್ರಸ್ತುತ ಕೆ.ಇ.ಆರ್. ಪ್ರಕಾರ ಎರಡು ಕಟ್ಟಡಗಳಲ್ಲಿ, ಏಳು ತರಗತಿ ಕೋಣೆ ಮತ್ತು ಒಂದು ಆಫೀಸು ರೂಂ ಕಾರ್ಯವೆಸಗುತ್ತಿದೆ. ಕುಡಿಯುವ ನೀರಿಗಾಗಿ ಬಾವಿ, ಬೋರ್‌ವೆಲ್, ಆಟದ ಮೈದಾನ, ಶಾಲೆಗೆ ವಿದ್ಯುತ್ ವ್ಯವಸ್ಥೆ ಇದೆ. ಈ ವರ್ಷ ಎಲ್ಲಾ ತರಗತಿ ಕೋಣೆಗಳಿಗೆ ರಕ್ಷಕರ ಕೊಡುಗೆಯಾಗಿ ಫ್ಯಾನಿನ ವ್ಯವಸ್ಥೆ ಮಾಡಲಾಗಿದೆ. ಮತ್ತು ಹಳೆವಿದ್ಯಾರ್ಥಿಗಳ ನೆರವಿನಿಂದ ಒಂದು ಝೆರಾಕ್ಸ್ ಪ್ರಿಂಟರ್ ದೊರಕಿದೆ. ಇತ್ತೀಚೆಗೆ ಇಂಗ್ಲೀಷ್ ಮಾಧ್ಯಮದ ಶಿಕ್ಷಣಕ್ಕಾಗಿ ನಮ್ಮ ಸುತ್ತಮುತ್ತಲಿನ ಮಕ್ಕಳು unaided ಶಾಲೆಗಳಿಗೆ ಹೋಗುವುದರಿಂದಾಗಿ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ಈ ಶಾಲೆಯ ಅಭಿವೃದ್ಧಿಗಾಗಿ ಇನ್ನೂ ಅನೇಕ ಸೌಲಭ್ಯಗಳ ಅಗತ್ಯವಿದೆ. ಆಧುನಿಕ ಜಗತ್ತಿನ ವಿದ್ಯಾಭ್ಯಾಸವನ್ನು ನಮ್ಮ ಶಾಲೆಯಲ್ಲಿ ಅಭಿವೃದ್ಧಿಪಡಿಸಲು ಉತ್ಸುಕರಾಗಿದ್ದರೂ ಅದಕ್ಕೆ ಹಲವಾರು ಪರಿಮಿತಿಗಳು ಎದುರಾಗುತ್ತಿದೆ. ಸುಸಜ್ಜಿತವಾದ ಸ್ಮಾರ್ಟ್ ಕ್ಲಾಸ್ ರೂಂ, ಸುಸಜ್ಜಿತ ಓದುವ ಕೋಣೆ, ಶೌಚಾಲಯದ

ಕೊರತೆ ಇದೆ. ಆಧುನಿಕ ಸೌಲಭ್ಯಗಳನ್ನು ಹೊಂದುವ ನಮ್ಮ ಕನಸಿಗೆ, ಕಂಪ್ಯೂಟರ್ ಶಿಕ್ಷಣಕ್ಕೆ ಬೇಕಾದ ಲ್ಯಾಪ್‌ಟಾಪ್, ಲ್ಯಾಬೋರೇಟರಿ, ಇಕ್ವಿಪ್‌ಮೆಂಟ್ಸ್, ಪೀಠೋಪಕರಣ ಇದರ ನಿರ್ಮಾಣಕ್ಕೆ ಹಣಕಾಸಿನ ತೊಂದರೆಯಿದೆ. ಶಾಲೆಗೆ ಸಾಕಷ್ಟು ಸ್ಥಳಾವಕಾಶವಿದ್ದರೂ ಜೈವ ಪಾರ್ಕ್ ಮಾಡಲು ಬೀಜದ ಅಭಾವ, ಹಣಕಾಸಿನ ತೊಂದರೆ ಇದೆ. ಏನಿದ್ದರೂ ಆಧುನಿಕ ರೀತಿಯ ಶಿಕ್ಷಣವನ್ನು ನಮ್ಮ ಊರಿನ ಮಕ್ಕಳಿಗೆ ಸಿಗುವಂತೆ ಮಾಡಲು ಶಿಕ್ಷಕರು, ಹಳೆ ವಿದ್ಯಾರ್ಥಿಗಳು, ಊರವರು, ಸ್ಥಳೀಯಾಡಳಿತ ಸಂಸ್ಥೆ, ಸರಕಾರ ಇವುಗಳ ಸಹಾಯವನ್ನು ಪಡೆದು ನಾವು ಕೂಡಾ ನಮ್ಮ ಶಾಲೆಯನ್ನು ಆಧುನಿಕ ರೀತಿಯ ಅಂತಾರಾಷ್ಟ್ರೀಯ ಮಟ್ಟದ ಶಿಕ್ಷಣ ನೀಡುವಲ್ಲಿ ಮುಂದೆ ಸಾಗಬೇಕಾಗಿದೆ.

# ವಿದ್ಯಾಲಯದ ಭೌತಿಕ ಸೌಕರ್ಯಗಳು — ಪ್ರಸ್ತುತ ಸ್ಥಿತಿಗತಿ

| ವಿಭಾಗ | ಪ್ರಸ್ತುತ ಇರುವಂಥವುಗಳು | ಇನ್ನೂ ಅಗತ್ಯವಿರುವವುಗಳು. |
|---|---|---|
| ಹೆಚ್ಚುವರಿ ತರಗತಿ ಕೋಣೆ | 6 | 2 |
| ಹುಡುಗರ ಪಾಯಿಖಾನೆ (ಟಾಯ್ಲೆಟ್) | 2 | 2 |
| ಹುಡುಗಿಯರಿಗಿರುವ ಪ್ರತ್ಯೇಕ ಪಾಯಿಖಾನೆ | 3 | 1 |
| ಶುದ್ಧವಾದ ಹಾಗೂ ಅಗತ್ಯಕ್ಕನುಸಾರ ಉಪಯೋಗಿಸಲು ಲಭ್ಯವಾಗುವ ಕುಡಿ ನೀರು ವ್ಯವಸ್ಥೆ | ಇದೆ | — |
| ಮುಖ್ಯೋಪಾಧ್ಯಾಯರ ಕೊಠಡಿ | ಇದೆ | 1 |
| ಆವರಣ ಗೋಡೆ, ಹಸಿರು ಬೇಲಿ ಇತರ ಬೇಲಿಗಳು | ಇದೆ | – |
| ಆಟದ ಮೈದಾನ | ಇದೆ | – |
| ತರಗತಿ ಕೋಣೆಗಳಲ್ಲಿ Rope with hand rail | ಇಲ್ಲ | 2 |
| ಅಡುಗೆ ಕೋಣೆ | ಇದೆ | — |

# ಮಕ್ಕಳ ಸಂಖ್ಯೆ

| | Total | | | SC | | | ST | | | OBC | | | Others | | | Muslim | | | OEC | | | Other Minority | | | Hindu OBC | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | B | G | T | B | G | T | B | G | T | B | G | T | B | G | T | B | G | T | B | G | T | B | G | T | B | G | T |
| I | 5 | 6 | 11 | 1 | 1 | 2 | – | – | – | 3 | 5 | 8 | 1 | – | 1 | 3 | 5 | 8 | – | – | – | – | – | – | – | – | – |
| II | 6 | 4 | 10 | 1 | 1 | 2 | – | – | – | 5 | 3 | 8 | – | – | – | 4 | 3 | 7 | 1 | – | 1 | – | – | – | 1 | 0 | 1 |
| III | 12 | 6 | 18 | 2 | 1 | 3 | – | – | – | 10 | 5 | 15 | – | – | – | 7 | 5 | 12 | 1 | – | 1 | – | – | – | 3 | 0 | 3 |
| IV | 16 | 6 | 22 | 3 | 2 | 5 | – | – | – | 13 | 4 | 17 | – | – | – | 10 | 4 | 14 | – | – | – | – | – | – | 3 | 0 | 3 |
| Total | 39 | 22 | 61 | 7 | 5 | 12 | – | – | – | 31 | 17 | 48 | 1 | – | 1 | 24 | 17 | 41 | 2 | 0 | 2 | – | – | – | 7 | 0 | 7 |
| V | 8 | 5 | 13 | – | – | – | – | – | – | 8 | 5 | 13 | – | – | – | 6 | 5 | 11 | 2 | 0 | 2 | – | – | – | 2 | 0 | 2 |
| Total | 47 | 27 | 74 | 7 | 5 | 12 | – | – | – | 39 | 22 | 61 | – | – | – | 30 | 22 | 52 | 4 | 0 | 4 | – | – | – | 9 | 0 | 9 |

## ಅಧ್ಯಾಪಕರು - ಪ್ರಸ್ತುತ ಸ್ಥಿತಿ.

| ವಿಭಾಗ | ಅಧ್ಯಾಪಕರ ಸಂಖ್ಯೆ | ಸ್ಥಿರ ಅಧ್ಯಾಪಕರು | ತಾತ್ಕಾಲಿಕ ಅಧ್ಯಾಪಕರು | 3 ವರ್ಷಗಳಿಂದ ಹೆಚ್ಚು ಇದೇ ಶಾಲೆಯಲ್ಲಿರುವವರು. |
|---|---|---|---|---|
| L.P. ವಿಭಾಗ | 5 | 5 | — | 5 |
| UP ವಿಭಾಗ | 1 | 1 | — | 1 |

# ದೃಷ್ಟಿಕೋನ.

ನಮ್ಮ ಶಾಲೆಯು ಇನ್ನಷ್ಟು ಸೌಕರ್ಯಗಳನ್ನು ಹೊಂದಿ ಪ್ರಗತಿಯಾಗಬೇಕಿದೆ. ಸುತ್ತಮುತ್ತಲಿನ ಪ್ರದೇಶದಲ್ಲಿ ಒಂದು ಮಾದರಿ ಶಾಲೆಯಾಗಿ ರೂಪುಗೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಹಲವಾರು ಕೆಲಸ ಕಾರ್ಯಗಳು ನಡೆಯಬೇಕಿದೆ. ಇದನ್ನೆಲ್ಲಾ ಕಾರ್ಯಗತಗೊಳಿಸಲು ಬೇಕಾಗಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಶಿಕ್ಷಣ ನೀಡುವುದು ಅನಿವಾರ್ಯವಾಗಿದೆ.

1. ಸುಸಜ್ಜಿತವಾದ ಓದುವ ಕೋಣೆ ಮತ್ತು ಗ್ರಂಥಾಲಯ.
2. ಆಧುನಿಕ ಸೌಕರ್ಯಗಳನ್ನು ಹೊಂದಿದ ಶೌಚಾಲಯಗಳು.
3. ಎಲ್ಲಾ ಮಕ್ಕಳಿಗೂ ಸುಲಭವಾಗಿ ಶಾಲೆಗೆ ಬರುವಂತೆ ಮಾಡಲು ಉಚಿತ ಶಾಲಾ ವಾಹನದ ವ್ಯವಸ್ಥೆ.
4. ಸುಸಜ್ಜಿತವಾದ ಊಟದ ಹಾಲ್.
5. ಹಚ್ಚ ಹಸುರಿನ ಹೂದೋಟಗಳಿಂದ ಕೂಡಿದ ಶಾಲಾ ಪರಿಸರ. ಜೈವ ವೈವಿಧ್ಯ ಪಾರ್ಕ ನಿರ್ಮಾಣ.
6. ತ್ಯಾಜ್ಯ ಸಂಗ್ರಹಣಾ ಘಟಕ, ಜೈವ ಗೊಬ್ಬರ ತಯಾರಿ.
7. ತರಗತಿ ಕೋಣೆಗಳನ್ನು ಸ್ಮಾರ್ಟ್ ಕ್ಲಾಸ್ ರೂಂಗಳನ್ನಾಗಿ ಪರಿವರ್ತಿಸುವುದು.
8. ಸುಸಜ್ಜಿತವಾದ ಕಂಪ್ಯೂಟರ್ ಕೋಣೆಗಳು.
9. ಆರ್ಥಿಕವಾಗಿ ಹಿಂದುಳಿದವರಿಗೆ ಧನ ಸಹಾಯ
10. LCD Projector

11. ತರಗತಿಗಳಲ್ಲಿ ಕಂಪ್ಯೂಟರ್ ಆಧಾರಿತ ಕಲಿಕಾ ವ್ಯವಸ್ಥೆ.

12. ಶಾಲೆಗೆ ಬಂದ ಎಲ್ಲಾ ಮಕ್ಕಳಿಗೆ ಅವರವರ ತರಗತಿಗಳಲ್ಲಿ ಗಳಿಸಬೇಕಾದ ಸಾಧನೆಗಳನ್ನು ಆಯಾ ತರಗತಿಗಳಲ್ಲಿ ಕಡ್ಡಾಯವಾಗಿ ಗಳಿಸಲು ವಿವಿಧ ಕಲಿಕಾ ತಂತ್ರಗಳನ್ನು ಉಪಯೋಗಿಸುವುದು.

13. ತರಗತಿಗಳಲ್ಲಿ ಮಕ್ಕಳಿಗೆ ಕುಳಿತುಕೊಳ್ಳಲು ಉತ್ತಮ ರೀತಿಯ ಕುರ್ಚಿ, ಡೆಸ್ಕ್‌ಗಳನ್ನು ಒದಗಿಸುವುದು.

14. ಶಾಲೆ ಮತ್ತು ಸಮಾಜ ಉತ್ತಮ ಬಾಂಧವ್ಯದಿಂದ ಇರಲು ಅವರನ್ನು ಶಾಲೆಗೆ ಆಕರ್ಷಿಸಲು ಅದಕ್ಕಾಗಿ ವಿಶೇಷವಾದ ಕಾರ್ಯಕ್ರಮಗಳನ್ನು ನೀಡುವುದು. ಯಾವಾಗಲೂ ರಕ್ಷಕರ ಸಲಹೆ ಸೇವೆಗಳನ್ನು ಸ್ವೀಕರಿಸುವುದು.

15. Smart classroom ನ್ನು ಹಂತ ಹಂತವಾಗಿ ಆರಂಭ ಮಾಡುವುದು.

# ಸಾಮಾನ್ಯ ಉದ್ದೇಶಗಳು

1. ಎಲ್ಲಾ ಮಕ್ಕಳಿಗೂ ಓದುವಿಕೆ ಮತ್ತು ಬರವಣಿಗೆಯನ್ನು ಖಾತರಿಪಡಿಸುವುದು.
2. ವಾಚನಾ ಬರಹ ಕೋಣೆಗಳು.
3. ತರಗತಿ ಲೈಬ್ರರಿ, ಶಾಲಾ ಲೈಬ್ರರಿ.
4. ಮಕ್ಕಳನ್ನು ಗ್ರಂಥಶಾಲೆಯ ಸದಸ್ಯರನ್ನಾಗಿಸುವುದು.
5. ಸಾಹಿತ್ಯಸಭೆ, ಬಾಲಸಭೆ ಇತ್ಯಾದಿಗಳನ್ನು ಹಮ್ಮಿಕೊಳ್ಳುವುದು.
6. ಓದುವಿಕೆಯ ವಿವಿಧ ವಿಧಗಳನ್ನು ಪರಿಚಯಿಸುವುದು.
7. ಉತ್ತಮ ವಾಚನಾ ಸಾಮಗ್ರಿಗಳನ್ನು ಲೈಬ್ರರಿಯಲ್ಲಿ ಸಜ್ಜುಗೊಳಿಸುವುದು.
8. ಓದುವಿಕೆ ಮತ್ತು ಬರವಣಿಗೆಯನ್ನು ಉತ್ತಮ ಪಡಿಸಲಾಗುವ ತಂತ್ರಗಳನ್ನು ತಯಾರಿಸುವುದು.
9. ದಿನಾಚರಣೆಗಳಿಗೆ ಸಂಬಂಧಿಸಿ ಓದುವಿಕೆ ಮತ್ತು ಬರವಣಿಗೆಗಿರುವ ಚಟುವಟಿಕೆಗಳನ್ನು ನೀಡುವುದು.
10. ಬರವಣಿಗೆಯ ವಿವಿಧ ಹಂತಗಳನ್ನು ಪರಿಚಯಿಸುವುದು.
11. ತರಗತಿಗಳಲ್ಲಿ ಭಾಷೆಗೆ ಸಂಬಂಧಿಸಿದ ಸಿ.ಡಿ ಮತ್ತು ಎಲ್.ಸಿ.ಡಿ ಗಳ ಫಲಪ್ರದ ಬಳಕೆ.
12. ಸಾಹಿತಿಗಳೊಂದಿಗೆ ಸಂದರ್ಶನ, ಸಂವಾದ ನಡೆಸುವುದು.
13. 1ರಿಂದ 12ನೇ ತರಗತಿ ವರೆಗಿನ ಮಕ್ಕಳು ನಿರೀಕ್ಷಿತ ಮಟ್ಟದ ತಿಳುವಳಿಕೆಗಳು ಮತ್ತು ಕೌಶಲ್ಯಗಳನ್ನು ಗಳಿಸಿರುವುದಾಗಿ ಖಾತರಿಪಡಿಸುವುದು.

14. ಎಲ್ಲಾ ಮಕ್ಕಳಿಗೂ ಕಲಿಕೆಗೂ ವಿಕಾಸಕ್ಕೂ ಸಮಾನವಾದ ಅವಕಾಶ ನೀಡುವುದು. ಸ್ವಂತ ಸಾಮರ್ಥ್ಯವನ್ನು ಗುರುತಿಸಿ ಅವುಗಳನ್ನು ಅತ್ಯುನ್ನತ ಮಟ್ಟಕ್ಕೆ ತಲುಪಿಸುವಲ್ಲಿ ತಡೆಯಾಗಿ ನಿಂತಿರುವವುಗಳನ್ನು ದಾಟಿ ಮುಂದುವರೆಯಲು ಸಂದರ್ಭವನ್ನೊದಗಿಸುವುದು.

15. ಉತ್ತಮ ದೈಹಿಕ, ಮಾನಸಿಕ, ಭಾವನಾತ್ಮಕ ಆರೋಗ್ಯವನ್ನು ಖಾತರಿಪಡಿಸುವುದು.

16. ಮಾತೃಭಾಷೆಯ ಜೊತೆಗೆ ಇಂಗ್ಲೀಷ್, ಹಿಂದಿ, ಭಾಷೆಗಳಲ್ಲಿ ಉನ್ನತ ನೈಪುಣ್ಯವನ್ನು ಗಳಿಸಲು ಸಹಾಯಕವಾದ ವಿಧಾನವನ್ನು ವಿಕಾಸಗೊಳಿಸುವುದು.

17. ನಿರಂತರವಾಗಿ ಮತ್ತು ಸಮಗ್ರವಾಗಿ ಮೌಲ್ಯನಿರ್ಣಯ ಮಾಡುವ ಪ್ರಕ್ರಿಯೆಯನ್ನು ಮೌಲ್ಯಮಾಪನದ ಅವಿಭಾಜ್ಯ ಅಂಗವಾಗಿ ಮಾರ್ಪಡಿಸುವುದು.

18. ಕಲಿಕೆಯನ್ನು ಪರಿಸರ ಸಂಬಂಧಿತ ಮತ್ತು ಜೀವನ ಮಾದರಿಯಾಗಿ ಮಾರ್ಪಡಿಸಲು ಜೀವವೈವಿಧ್ಯ, ವ್ಯವಸ್ಥೆಗಳ ಸಾಧ್ಯತೆಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳುವುದು ಮತ್ತು ಅದರ ಮೂಲಕ ಶಾಲಾ ಪರಿಸರವನ್ನು ಒಂದು ಪಠ್ಯಪುಸ್ತಕವಾಗಿ ಬದಲಾಯಿಸುವುದರ ಅಂಗವಾಗಿ ಪ್ರತಿಯೊಂದು ಶಾಲಾ ಪರಿಸರವನ್ನು ಜೀವವೈವಿಧ್ಯ ಉದ್ಯಾನವಾಗಿ ಮಾರ್ಪಡಿಸುವುದು.

## ಕ್ರಿಯಾತ್ಮಕ ಚಟುವಟಿಕೆಗಳು :-

### 1. ಓದುವಿಕೆ :-

ಪ್ರೀ ಟೆಸ್ಟ್ ನಡೆಸಿ ಹಿಂದುಳಿದ ಮಕ್ಕಳನ್ನು ಗುರುತಿಸುವುದು. ಅಕ್ಷರಗಳನ್ನು ಮನದಟ್ಟು ಮಾಡಲು ಪೂರಕವಾದ ಪದ ಕಾರ್ಡ, ಅಕ್ಷರ ಕಾರ್ಡ, ವಾಕ್ಯಗಳ ಕಾರ್ಡ ಇತ್ಯಾದಿಗಳನ್ನು ತರಗತಿಗಳಲ್ಲಿ ನೀಡುವುದು.

### 2. ICT ಮೂಲಕ ಬೋಧನೆ :-

ಪಾಠಭಾಗಕ್ಕೆ ಸಂಬಂಧಿಸಿದ ವೀಡಿಯೋ ಪ್ರದರ್ಶನ ಮಾಡಿ ಅದರ ಬಗ್ಗೆ ಮಕ್ಕಳಿಗೆ ಸರಳ ವಾಕ್ಯಗಳನ್ನು ಹೇಳಲು ಮತ್ತು ಬರೆಯಲು ಅವಕಾಶ ನೀಡುವುದು.

### 3. ಕಥೆಯನ್ನು ಪೂರ್ಣಗೊಳಿಸುವುದು :-

ಕಥೆಯ ಆರಂಭದ ಸನ್ನಿವೇಶವನ್ನು ನೀಡಿ ವಿಸ್ತೃತಾತ್ಮಕವಾಗಿ ಮುಂದಿನ ಅದನ್ನು ಮಕ್ಕಳಿಗೆ ಮುಂದುವರಿಸಿ ಬರೆಯಲು ತಿಳಿಸುವುದು.

### 4. ಅಡಿ ಟಿಪ್ಪಣಿ ಬರೆಯುವುದು :-

ಮಕ್ಕಳಿಗೆ ಪಾಠಭಾಗಕ್ಕೆ ಸಂಬಂಧಿಸಿದ ಕೆಲವು ಚಿತ್ರಗಳನ್ನು ತೋರಿಸಿ ಅಡಿಟಿಪ್ಪಣಿ ಬರೆಸುವುದು.

### 5. ಓದಿನ ಟಿಪ್ಪಣಿ ತಯಾರಿ :-

ತರಗತಿಗೆ ಸಂಬಂಧಿಸಿದ ಲೈಬ್ರರಿ ಪುಸ್ತಕಗಳನ್ನು ಮಕ್ಕಳಿಗೆ ನೀಡಿ ಓದಿನ ಟಿಪ್ಪಣಿ ಬರೆಯಲು ತಿಳಿಸುವುದು. ಉದಾಹರ

ಟಿಪ್ಪಣಿಯೊಂದಿಗೆ ಓದಲು ತರಬೇತಿ ನೀಡುವುದು.

6. ದಿನಾಚರಣೆಗಳಿಗೆ ಸಂಬಂಧಿಸಿದ ಪುಸ್ತಕ ಓದುವಿಕೆ :-

ದಿನಾಚರಣೆಗಳಿಗೆ ಸಂಬಂಧಿಸಿದ ಚಿತ್ರರಚನೆ, ರಸಪ್ರಶ್ನೆ, ಶುಭಾಶಯ ಪತ್ರ, ಮಹಾತ್ಮರ ಕುರಿತು ಟಿಪ್ಪಣಿ ಇತ್ಯಾದಿ ಚಟುವಟಿಕೆಗಳನ್ನು ಬರೆಯಲು ನೀಡುವುದು.

7. ಮಕ್ಕಳ ಹಸ್ತಪತ್ರಿಕೆ ತಯಾರಿ :-

ಪಾಠಭಾಗಕ್ಕೆ ಸಂಬಂಧಿಸಿ ಮಕ್ಕಳ ಸೃಜನಾತ್ಮಕ ಚಟುವಟಿಕೆಗಳನ್ನು ಒಟ್ಟು ಸೇರಿಸಿ ಹಸ್ತಪತ್ರಿಕೆ ತಯಾರಿ ಮಾಡುವುದು.

8. ಸಾಹಿತ್ಯ ಸಭೆ, ಬಾಲ ಸಭೆ :-

ಮಕ್ಕಳಲ್ಲಿ ಸೃಜನಾತ್ಮಕತೆಯನ್ನು ಪ್ರೋತ್ಸಾಹಿಸಲು ಶಾಲೆಗಳಲ್ಲಿ ಸಾಹಿತ್ಯಸಭೆ ಮತ್ತು ಬಾಲಸಭೆಯನ್ನು ಏರ್ಪಡಿಸುವುದು.

9. ಸಾಹಿತಿಯೊಂದಿಗೆ ಸಂವಾದ ನಡೆಸುವುದು :-

ಮಕ್ಕಳಿಗೆ ಸಾಹಿತ್ಯದಲ್ಲಿ ಅಭಿರುಚಿ ಉಂಟುಮಾಡಲು ಶಾಲೆಗೆ ಸಂಪನ್ಮೂಲ ವ್ಯಕ್ತಿಗಳನ್ನು ಆಮಂತ್ರಿಸುವುದು.

10. ಮಕ್ಕಳ ಸುಪ್ತ ಪ್ರತಿಭೆಯನ್ನು ನಿಖರವಾಗಿ ಗುರುತಿಸಿ ಅವರನ್ನು ಅತ್ಯುನ್ನತ ಮಟ್ಟಕ್ಕೆ ತಲುಪಿಸಲು ಬೇಕಾದ ಮಾರ್ಗದರ್ಶನ ಮತ್ತು ತರಬೇತಿ ನೀಡುವುದು.

11. ವಾರ್ತೆ ಓದು :-

ಮಕ್ಕಳಲ್ಲಿ ವಾಚನಾ ಸಾಮರ್ಥ್ಯವನ್ನು ಬೆಳೆಸಲು

ಹಲವು ವಿವಿಧ ವಾರ್ತಾಪತ್ರಿಕೆಗಳು ಮತ್ತು ಬಾಲ ಮಾಸಿಕಗಳು, ವಾರ್ತಾಪತ್ರಿಕೆಗಳು ಮಕ್ಕಳಿಗೆ ಲಭ್ಯವಾಗುವಂತೆ ನೋಡಿಕೊಳ್ಳುವುದು. ಅಸೆಂಬ್ಲಿಯಲ್ಲಿ ಪ್ರತಿದಿನ ವಾರ್ತೆ ಓದುವುದು.

12. IEDC ಮಕ್ಕಳಿಗೆ ಪ್ರತ್ಯೇಕ ಪರಿಗಣನೆ ನೀಡುವುದು.

13. ಸ್ವ ಅನುಭವದಿಂದ ಕಲಿಯಲು ಮಕ್ಕಳಿಗೆ ಶೈಕ್ಷಣಿಕ ಪ್ರವಾಸ, ಬಯಲು ಪ್ರವಾಸ ಕೈಗೊಳ್ಳುವುದು.

ಎಲ್ಲಾ ಮಕ್ಕಳು ಸ್ವತಃ ನಿರೀಕ್ಷಣೆ ಮಾಡಿ ಕಲಿಯಲು ಮತ್ತು ಕಲಿಕೆಯನ್ನು ಹೆಚ್ಚು ರಸವತ್ತಾಗಿ ಮತ್ತು ಪರಿಣಾಮಕಾರಿಯಾಗಿ ಮಾಡಿ ಕಲಿಯಲು ಶಾಲೆಗಳಲ್ಲಿ ಶೈಕ್ಷಣಿಕ ಪ್ರವಾಸ ಮತ್ತು ಬಯಲು ಪ್ರವಾಸವನ್ನು ಹಮ್ಮಿಕೊಳ್ಳುವುದು.

14. ಗ್ರಂಥಾಲಯ ಸಜ್ಜೀಕರಣ :-

ಮಕ್ಕಳ ಮಟ್ಟಕ್ಕನುಗುಣವಾಗಿ, ಮಕ್ಕಳ ಆಸಕ್ತಿಯನ್ನು ಕೆರಳಿಸುವ, ಮಕ್ಕಳ ಕಲಿಕೆಗೆ ಪೂರಕವಾದ ಕೆಲವು ಮಾಹಿತಿಗಳು ಲಭ್ಯವಿರುವ ಸಾಕಷ್ಟು ಪುಸ್ತಕಗಳನ್ನು ಶಾಲಾ ಲೈಬ್ರೆರಿಯಲ್ಲಿ ಸಜ್ಜುಗೊಳಿಸುವುದು. ವಾರದಲ್ಲಿ ಒಂದು ದಿನ ಮಕ್ಕಳಿಗೆ ಪುಸ್ತಕಗಳನ್ನು ಓದಲು ಕೊಡುವುದು. ಪ್ರತಿ ದಿನ ಅಸೆಂಬ್ಲಿಯಲ್ಲಿ ಒಂದು ಪುಸ್ತಕದ ಪರಿಚಯ ಮಾಡುವುದು.

15. ದಿನಾಚರಣೆಗಳ ಆಚರಣೆ :-

ದಿನಾಚರಣೆಗಳಿಗೆ ಸಂಬಂಧಿಸಿ ರಸಪ್ರಶ್ನೆ, ಚಿತ್ರ ರಚನೆ, ಕವಿತಾ ರಚನೆ, ವಿವಿಧ ರೀತಿಯ ಆಟಗಳನ್ನು ನಡೆಸುವುದು. ಪೋಸ್ಟರ್ ತಯಾರಿ, ಸಂಪನ್ಮೂಲ ವ್ಯಕ್ತಿಗಳಿಂದ ತರಗತಿ

ನಡೆಸುವುದು, ಸಾಂಸ್ಕೃತಿಕ ಕಾರ್ಯಕ್ರಮ ನಡೆಸುವುದು.

**16. ಐ.ಟಿ. ಆಧಾರಿತ ಕಲಿಕೆ :-**

ಪಾಠಭಾಗಕ್ಕೆ ಸಂಬಂಧಿಸಿದ ಪಿ.ಪಿ.ಗಳನ್ನು ಹೆಚ್ಚಿನ ಕಲಿಕಾ ಮಾಹಿತಿಗಳನ್ನು ಎಲ್.ಸಿ.ಡಿ. ಪ್ರೊಜೆಕ್ಟರ್ ಮೂಲಕ ತೋರಿಸಿ ತರಗತಿ ನಡೆಸುವುದು.

**17. ಸ್ಮಾರ್ಟ್ ಕ್ಲಾಸ್ ರೂಂ :-**

ಕಲಿಕೆಯನ್ನು ಆಸಕ್ತಿದಾಯಕವಾಗಿ ಮಾಡಲು ಪಾಠಭಾಗಕ್ಕೆ ಸಂಬಂಧಿಸಿದ ಆಕರ್ಷಕ ಚಿತ್ರಗಳು, ವಿವಿಧ ರೀತಿಯ ಕಲಿಕೋಪ-ಕರಣಗಳು ಮತ್ತು ಐ.ಟಿ. ಆಧಾರಿತ ಕಲಿಕೆಗೆ ಪೂರಕವಾದ ಕಂಪ್ಯೂಟರ್ ಮತ್ತು L.C.D ಪ್ರೊಜೆಕ್ಟರ್ ವ್ಯವಸ್ಥೆಯನ್ನು ತರಗತಿಗಳಲ್ಲಿ ಮಾಡುವುದು.

**18. ಕ್ಲಬ್ ಚಟುವಟಿಕೆಗಳು :-**

ಪ್ರತಿ ತರಗತಿಗಳಲ್ಲಿ ಆರೋಗ್ಯ ಮತ್ತು ಸ್ವಚ್ಛತೆ ಕ್ಲಬ್, ವಿಜ್ಞಾನ ಕ್ಲಬ್ ರೂಪಿಸುವುದು. ಪ್ರತಿ ದಿನ ಶಾಲಾ ಪರಿಸರ ಶುಚಿಗೊಳಿಸುವುದು. ಹೆಲ್ತ್ ಸೆಂಟರ್‌ನ ಸಹಾಯದಲ್ಲಿ ಹೆತ್ತವರಿಗೆ ಮತ್ತು ಮಕ್ಕಳಿಗೆ ಆರೋಗ್ಯ ಶಿಬಿರವನ್ನು ಏರ್ಪಡಿಸುವುದು. ಪಾಠಭಾಗಕ್ಕೆ ಸಂಬಂಧಿಸಿ ಸರಳ ಪ್ರಯೋಗ ನಡೆಸಿ ಪ್ರಯೋಗ ಟಿಪ್ಪಣಿ ಬರೆಸುವುದು.

**19. ಜೈವ ವೈವಿಧ್ಯ ಉದ್ಯಾನ :-**

* ಸಸ್ಯ ವೈವಿಧ್ಯವನ್ನು ಪರಿಗಣಿಸಿಕೊಂಡು ಪ್ರಾದೇಶಿಕವಾಗಿ ಲಭ್ಯ

ಇರುವ ಸಸ್ಯಗಳನ್ನು ನೆಡುವುದು.

* ಔಷಧಿ ತೋಟ ನಿರ್ಮಾಣ.

* ಕೈತೋಟ ನಿರ್ಮಾಣ.

* ಪ್ಲಾಸ್ಟಿಕ್ ಮುಕ್ತ ಪರಿಸರವನ್ನು ಮಾಡುವುದು. ಪ್ಲಾಸ್ಟಿಕ್ ವಸ್ತುಗಳ ಬಳಕೆಯನ್ನು ಕಡಿಮೆ ಮಾಡುವುದು.

* ಪಕ್ಷಿಗಳನ್ನು ಆಕರ್ಷಿಸುವುದಕ್ಕೆ ಅಗತ್ಯವಾದ ವ್ಯವಸ್ಥೆಗಳನ್ನು ಮಾಡುವುದು.

20. <u>ಪಠ್ಯೇತರ ಮತ್ತು ಪಠ್ಯ ಚಟುವಟಿಕೆಗಳು</u> :-

* LSS ಮತ್ತು ನವೋದಯ ಪರೀಕ್ಷೆಗಳಿಗೆ ಅರ್ಹ ವಿದ್ಯಾರ್ಥಿಗಳಿಗೆ ಪ್ರತ್ಯೇಕ ತರಬೇತಿ ನೀಡುವುದು.

* ಉಪಜಿಲ್ಲಾ ಮಟ್ಟದ ಆಟೋಟ ಸ್ಪರ್ಧೆ, ಕಲೋತ್ಸವ, ವಿಜ್ಞಾನ ಮೇಳಗಳಲ್ಲಿ ಭಾಗವಹಿಸುವುದು.

* ಶಾಲಾ ಮಟ್ಟದಲ್ಲಿ ಆಟೋಟ ಸ್ಪರ್ಧೆ, ಸೃಜನೋತ್ಸವ, ವೃತ್ತಿ ಪರಿಚಯ ಮೇಳ, ಬಾಲಸಭೆ ಇತ್ಯಾದಿಗಳನ್ನು ಏರ್ಪಡಿಸುವುದು.

21. <u>ತರಕಾರಿ ತೋಟ ನಿರ್ಮಾಣ</u> :-

ಶಾಲಾ ಪರಿಸರದಲ್ಲಿ ಮಕ್ಕಳಿಗೆ ಪೋಷಕಾಂಶಯುಕ್ತ ರಾಸಾಯನಿಕ ಮುಕ್ತ ತರಕಾರಿಗಳನ್ನು ನೀಡಲು ಶಾಲಾ ಪರಿಸರದಲ್ಲಿ ತರಕಾರಿ ತೋಟವನ್ನು ನಿರ್ಮಿಸುವುದು.

# English

| Sl No | Activity | ಕಾಲಾವಧಿ | ಕ್ಲಾಸ್ | ಜವಾಬ್ದಾರಿ |
|---|---|---|---|---|
| 1. | Story time | ಜೂನ್, ಜುಲೈ ತಿಂಗಳು 2 ಮತ್ತು 4ನೇ ಶುಕ್ರವಾರ ಇಂಗ್ಲೀಷ್ ಡೇ ಮಾಡುವುದು. ಪಾಠಗಳಿಗೆ ಪೂರಕವಾದ ಕತೆಗಳನ್ನು ಹೇಳುವುದು. ಪ್ರಾಣಿಗಳ, ಪಕ್ಷಿಗಳ ಕತೆಗಳು. | 1-5 ರ ವರೆಗೆ | class Teacher. |
| 2 | News Reading | English News Paper ಓದುವುದು. ವಾರಕ್ಕೊಮ್ಮೆ English ವಾರ್ತೆ ಓದುವುದು. | 5 | class Teacher. |
| 3. | Drama | September–October ಪಾಠಭಾಗದಲ್ಲಿ ಬರುವ ಪಾಠಗಳನ್ನು ಇಂಗ್ಲೀಷ್ ನಾಟಕವಾಗಿ ಬದಲಾಯಿಸಿ ಅಭಿನಯಿಸುವುದು. | 5 | Class Teacher. |

# ಭೌತಿಕ ಯೋಜನೆ.

| ಉದ್ದೇಶ | ಚಟುವಟಿಕೆ | ಕಾಲಾವಧಿ | ಮೊತ್ತ | ಜವಾಬ್ದಾರಿ |
|---|---|---|---|---|
| ಶೈಕ್ಷಣಿಕ ಚಟುವಟಿಕೆಗೆ ಪೂರಕವಾದ ವಾತಾವರಣ ಕಲ್ಪಿಸುವುದು. | ಮಕ್ಕಳಿಗೆ ಕುಳಿತುಕೊಳ್ಳಲು ಬೆಂಚು, ಡೆಸ್ಕ್ ನಿರ್ಮಿಸುವುದು. | ವಾರ್ಷಿಕ | 1,00,000 | PTA<br>OSA<br>Panchayath |
| | ICT, Laptop ಒದಗಿಸುವುದು. | ವಾರ್ಷಿಕ | 1,50,000 | PTA<br>OSA<br>Panchayath |
| | 2 ತರಗತಿ ಕೋಣೆ ನಿರ್ಮಾಣ ಮಾಡುವುದು<br>Computer Lab<br>Library room. | ವಾರ್ಷಿಕ | 1,50,000 | PTA<br>OSA<br>Panchayath<br>Govt. |

| ಕಾರ್ಯಕ್ರಮ | ಚಟುವಟಿಕೆಗಳು | ಅವಧಿ | ಸಾಮಗ್ರಿಗಳು | ಸಹಾಯ |
|---|---|---|---|---|
| 1. ಭಾಷೆಯಲ್ಲಿ ಓದಲು, ಬರೆಯಲು ಬಾರದವರಿಗೆ ಪರಿಹಾರ ಬೋಧನೆ ನೀಡು. | Pre-test ನಡೆಸುವುದು.<br>- ಅಕ್ಷರ ಸ್ಪಷ್ಟ ಹೇಳಿಸುವುದು.<br>- ಅಕ್ಷರ ಕಾರ್ಡ್ ನೀಡಿ ಓದಿಸುವುದು ಬರೆಯುವುದು.<br>- ವಾಕ್ಯಗಳನ್ನು ಬರೆದ ಕಾರ್ಡ್ ನೀಡಿ ವಾಕ್ಯ ನಿರ್ಮಾಣ.<br>- ಚಿತ್ರದ ಬಗ್ಗೆ ಹೇಳುವುದು, ಬರೆಯುವುದು.<br>- ಚಿತ್ರ ನೋಡಿ ಕತೆ ಹೇಳುವುದು.<br>- ಕತೆ ಮುಂದುವರಿಸುವುದು.<br>- ಕತೆ ಪುಸ್ತಕ ನೀಡಿ ಓದಿಸುವುದು. | ಹ್ರಸ್ವಕಾಲ<br>ಜೂನ್<br>ಜುಲೈ<br>1-5 ನೇ ತರಗತಿ | ಪುಸ್ತಕ<br>Flash card<br>C.D. | BRC<br>DIET<br>Teacher |
| 2. ಮಗುವನ್ನು ಉತ್ತಮ ಓದುಗಾರನನ್ನಾಗಿ ಮಾಡುವುದು. | - ಓದುವ ಕೋಣೆಯನ್ನು ಮಾಡುವುದು.<br>- ಓದುವ ಮೂಲೆ, ಲೈಬ್ರರಿ ರೂಪಿಸುವುದು.<br>- ಲೈಬ್ರರಿ ಸಹಕಾರ<br>- ವಾಚನಾ ಕೂಟ ಸಂಘಟಿಸುವುದು.<br>- ಪತ್ರಿಕೆ ಓದುವುದು.<br>- ಕತೆ ಪುಸ್ತಕ ಓದುವುದು.<br>- ಟಿಪ್ಪಣಿ ಬರೆಯುವುದು.<br>- ಗ್ರಂಥಾಲಯ ಸದಸ್ಯರಾಗಿ ಪುಸ್ತಕ ಓದುವುದು. | ಮಧ್ಯಕಾಲ<br>6 ತಿಂಗಳು<br>1-5 ನೇ ತರಗತಿ | ಪುಸ್ತಕ<br>ವಾರ್ತಾ ಪತ್ರಿಕೆ | BRC<br>DIET<br>PTA<br>Library<br>Teacher |

| | | | | |
|---|---|---|---|---|
| 3. ಮಗುವನ್ನು ಉತ್ತಮ ಬರಹಗಾರನನ್ನಾಗಿ ಮಾಡುವುದು. | - ಬರಹಕೌಶಲ ಕಾರ್ಯಾಗಾರ<br>- ಪುಸ್ತಕ ಜಾತ್ರೆ<br>- ತರಗತಿ ಪತ್ರಿಕೆ ರಚಿಸುವುದು<br>- ಹಸ್ತ ಪತ್ರಿಕೆ ತಯಾರಿ<br>- ಶಿಕ್ಷಣ ಚಿತ್ರಗಳ ರಚನೆ<br>- ಸಾಹಿತಿ, ಸಾಹಿತ್ಯಗಳ ಪರಿಚಯ ಮಾಡಿಕೊಳ್ಳುವುದು.<br>- ಗೋಡೆ ಬರಹ, ಸುಭಾಷಿತಗಳ ಸಂಗ್ರಹ, ತಯಾರಿ<br>- ಓದಿನ ಚಿತ್ರ ಬರೆಯುವುದು.<br>- ಸ್ವಂತ ರಚನೆ, ಗುಂಪು ರಚನೆ.<br>- ಸಾಹಿತ್ಯಕಾರ, ಕವಿಗಳ ಸಂದರ್ಶನ ನಡೆಸುವುದು.<br>- ಪ್ರಬಂಧ ರಚಿಸುವುದು. | ಪ್ರತಿವಾರ<br>6 ತಿಂಗಳು<br>1 ವರ್ಷ<br>1-5ನೇ ತರಗತಿ | | BRC<br>DIET<br>PTA<br>Teacher |

# ತಕ್ಷಣ ಕೈಗೊಳ್ಳುವ ಚಟುವಟಿಕೆಗಳು

| ಉದ್ದೇಶ | ಚಟುವಟಿಕೆ | ಕಾಲಾವಧಿ | ಜವಾಬ್ದಾರಿ |
| --- | --- | --- | --- |
| ಎಲ್ಲಾ ಮಕ್ಕಳಿಗೆ ಓದಲು, ಬರೆಯಲು ಕಲಿ ಪಡಿಸುವುದು | - ಓದುವ ಸ್ಪರ್ಧೆ<br>- ಪದಗಳ ಓದು - ಕಾರ್ಡ್‌ಗಳಿಂದ<br>- ಇಂಗ್ಲೀಷ್ ಓದು<br>- ಸಾಕ್ಷರ ಕಾರ್ಯಕ್ರಮ ನಡೆಸುವುದು<br>- ಬರಹ ಕೋಟ<br>- ಅಕ್ಷರಗಳನ್ನು ಜೋಡಿಸಿ ಪದಗಳ ನಿರ್ಮಾಣ.<br>- ವಾಕ್ಯಗಳ ರಚನೆ.<br>- ಓದುವಿಕೆ, ಬರವಣಿಗೆ<br>- ಸಂಕಲನ, ವ್ಯವಕಲನ, ಗುಣಾಕಾರಗಳ ಚಟುವಟಿಕೆ<br>- ಹಿಂದುಳಿದ ಮಕ್ಕಳಿಗೆ ಪ್ರತ್ಯೇಕ ರೀತಿಯ ಚಟುವಟಿಕೆ ನೀಡುವುದು | ಶೂನ್ಯಕಾಲ ಬಿಡುವಿನ ವೇಳೆ<br>1-5 ನೇ ತರಗತಿ | ಕ್ಲಾಸ್ ಟೀಚರ್ |

## ಉಪಸಂಹಾರ :-

ವಿದ್ಯಾಲಯ ಎಂಬುದು ಸಮಾಜದ ಅವಿಭಾಜ್ಯ ಅಂಗ. ಎಲ್ಲಾ ಜಾತಿ, ಭೇದ ಮರೆತು ಒಟ್ಟಿಗೆ ಕುಳಿತು ಕಲಿಯುವ, ಆಡುವ ಕೇಂದ್ರ. ಶ್ರೀಮಂತರು, ಬಡವರು ಎಂಬುದನ್ನು ಮರೆತು ಕಲೆ, ಸಂಸ್ಕೃತಿಯನ್ನು ಕಲಿತು, ಮುಂದಿನ ಜನಾಂಗಕ್ಕೆ ಒಬ್ಬ ಉತ್ತಮ ಪ್ರಜೆಯನ್ನು ರೂಪಿಸುವಲ್ಲಿ ವಿದ್ಯಾಲಯ ಪ್ರಮುಖ ಪಾತ್ರ ವಹಿಸುತ್ತದೆ. ಇಂದಿನ ಕಾಲದಲ್ಲಿ ಎಲ್ಲಾ ಮಕ್ಕಳಿಗೆ ಉತ್ತಮವಾದ ಕಲಿಕಾ ವಾತಾವರಣವನ್ನುಂಟು ಮಾಡುವುದು. ನಮ್ಮ ಆದ್ಯ ಕರ್ತವ್ಯ. ಮಗುವಿನಲ್ಲಿರುವ ಪ್ರತಿಭೆಗಳನ್ನು ಕಂಡು ಹುಡುಕಿ ಅವನನ್ನು ಪ್ರೋತ್ಸಾಹಿಸುವ ಜವಾಬ್ದಾರಿ ನಮ್ಮ ಮೇಲಿದೆ. ಶಿಕ್ಷಕರಷ್ಟೇ ಜವಾಬ್ದಾರಿ ಹೆತ್ತವರಿಗೂ ಇದೆ. "ಉಚಿತ ಶಿಕ್ಷಣ, ಕಡ್ಡಾಯ ಶಿಕ್ಷಣ" ಪ್ರತಿಯೊಂದು ಮಗುವಿನ ಹಕ್ಕು. ಈ ನಿಟ್ಟಿನಲ್ಲಿ ಇದೆಲ್ಲವನ್ನೂ ಒದಗಿಸಲು ಶಾಲೆಗಳಲ್ಲಿ ಶೈಕ್ಷಣಿಕವಾದ ಮತ್ತು ಭೌತಿಕವಾದ ಉದ್ದೇಶಗಳನ್ನು ಇಟ್ಟು ಹಲವಾರು ಚಟುವಟಿಕೆಗಳನ್ನು ಆಯೋಜಿಸಲಾಗಿದೆ. ಒಂದು ತರಗತಿಯಲ್ಲಿರುವ ಪ್ರತಿಯೊಂದು ಮಗುವು ಕಲಿಕೆಯಲ್ಲಿ ಮುಂದೆ ಬರಬೇಕು. ಅವನಿಗೆ ಬೇಕಾದ ಕಲಿಕಾ ವಾತಾವರಣವನ್ನು ಒದಗಿಸುವುದು ಪೋಷಕರು, ಶಿಕ್ಷಕರಾದ ನಮ್ಮ ಕರ್ತವ್ಯ. ಈ ಯೋಜನೆಗಳೆಲ್ಲಾ ಸಾಕಾರಗೊಂಡಲ್ಲಿ ಮಕ್ಕಳು ಉತ್ತಮ ಪ್ರಜೆಗಳಾಗಬಹುದು.